O.S.No.:482/2015
P.W.:4

ಈ ದಿನ ದಿಃ04.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಎಂ.ಕೆ ವಕೀಲರಿಂದಃ</u>**

ನಾಗರಾಜು ರವರು ಬೋರಲಿಂಗಯ್ಯ ಇವರ ವಿರುದ್ದ ದಾವೆ ಸಲ್ಲಿಸಿರುತ್ತಾರೆ. ಸದರಿ ಬೋರಲಿಂಗಯ್ಯ ಮೃತರಾಗಿರುತ್ತಾರೆ. ಹೊರಲಗಲ್ಲು ಗ್ರಾಮದ ಸರ್ವೆ ನಂ.179 ರ ಕ್ಷೇತ್ರ 1 ಎಕರೆ 20 ಗುಂಟೆ ಜಮೀನಿನ ಕುರಿತಾಗಿ ದಾವೆ ಸಲ್ಲಿಸಿರುತ್ತಾರೆ. ದಾವಾಜಮೀನಿನ ಚಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ಬೋರಲಿಂಗಯ್ಯ ಇವರು ವಾದಿ ನಾಗರಾಜು ಇವರಿಗೆ ಕ್ರಯದ ಕರಾರು ಪತ್ರವನ್ನು 2006 ರಲ್ಲಿ ರೂ.1.80,000/-ಕ್ಕೆ ಆಗಿದ್ದು, ಅದರಲ್ಲಿ 15 ಸಾವಿರ ಹಣವನ್ನು ಮುಂಗಡ ನೀಡಿ ಬರೆದುಕೊಟ್ಟಿರುತ್ತಾರೆ. ಸದರಿ ಕರಾರು ಪತ್ರ ಸಂದರ್ಭದಲ್ಲಿ ವಾದಿಯರು, ಪ್ರತಿವಾದಿ ಪ್ರತಿವಾದಿಯ ಹೆಂಡತಿ, ಸಾಕ್ಷಿದಾರರಾದ ಮಹದೇವಯ್ಯ ಮತ್ತು ನಾನು ಹಾಜರಿದ್ದೆವು. ತಾಲ್ಲೂಕು ಕಚೇರಿಯ ಬಳಿ ವಾದಿ ಪ್ರತಿವಾದಿಗೆ ರೂ.15,000/- ಮುಂಗಡ ಹಣ ನೀಡಿರುತ್ತಾರೆ.

ಬೋರಲಿಂಗಯ್ಯನಿಗೆ ನಾಲ್ಕು ಗಂಡು ಮಕ್ಕಳು ಮತ್ತು ಇಬ್ಬರೂ ಹೆಣ್ಣು ಮಕ್ಕಳು ಇರುತ್ತಾರೆ, ಹೆಂಡತಿ ಮೃತರಾಗಿರುತ್ತಾರೆ. ಬೋರಲಿಂಗಯ್ಯ ಇವರಿಗೆ ದಾವಾಸ್ವತ್ತು ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿ. ಸದರಿ ಮಂಜೂರಾಗಿರುವ ವಿಚಾರ ನನಗೆ ಗೊತ್ತಿತ್ತು. ಮಂಜೂರಾದ ದಾಖಲೆಯನ್ನು ನಾನು ನೋಡಿರುತ್ತೇನೆ. ಕರಾರು ಪತ್ರ ಬರೆಯುವ ಸಂದರ್ಭದಲ್ಲಿ ಬೋರಲಿಂಗಯ್ಯನ ಮಕ್ಕಳು ಗ್ರಾಮದಲ್ಲಿ ಇರಲಿಲ್ಲ. ಸದರಿ ಕರಾರು ಪತ್ರದ ವಿಚಾರ ಅವರಿಗೆ (ಮಕ್ಕಳಿಗೆ) ಗೊತ್ತಿರುವುದಿಲ್ಲ. ಸದರಿ ಬೋರಲಿಂಗಯ್ಯನ ಮಕ್ಕಳು ಕರಾರು ಪತ್ರ ವಿಷಯ ತಿಳಿದ ಬಗ್ಗೆ ಮತ್ತು ನ್ಯಾಯಾಲಯಕ್ಕೆ ಬಂದ ಬಗ್ಗೆ ನನಗೆ ಗೊತ್ತಿಲ್ಲ.

ದಾವಾಸ್ವತ್ತಿನಲ್ಲಿ ವಾದಿ ನಾಗರಾಜು ಸ್ವಾಧೀನಾನುಭವದಲ್ಲಿರುತ್ತಾರೆ.

O.S.No.:482/2015
P.W.:4

ಪ್ರತಿವಾದಿ ಬೋರಲಿಂಗಯ್ಯ ವಾದಿಗೆ ಯಾವುದೇ ಕ್ರಯದ ಕರಾರುಪತ್ರ ಬರೆದುಕೊಟಿರುವುದಿಲ್ಲ ಮತ್ತು ವಾದಿಯಿಂದ ಮುಂಗಡವಾಗಿ ರೂ.15 ಸಾವಿರ ಹಣವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯವಾಗಲು ಬೋರಲಿಂಗಯ್ಯ ಕರಾರುಪತ್ರ ಬರೆದುಕೊಟ್ಟಿರುತ್ತಾರೆ ಮತ್ತು ರೂ.15 ಸಾವಿರ ಹಣ ಮುಂಗಡ ಪಡೆದಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.

ಈ ದಿನ ದಿಃ04.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಎಂ.ಕೆ ವಕೀಲರಿಂದಃ**

ನಾನು ಹೊರಲಗಲ್ಲು ಗ್ರಾಮದಲ್ಲಿ ವಾಸವಿರುತ್ತೇನೆ. ನಾಗರಾಜು ರವರು ಬೋರಲಿಂಗಯ್ಯ ಇವರ ವಿರುದ್ದ ದಾವೆ ಸಲ್ಲಿಸಿರುತ್ತಾರೆ. ಬೋರಲಿಂಗಯ್ಯ ವಾದಿ ನಾಗರಾಜು ಇವರಿಗೆ ಕ್ರಯದ ಕರಾರು ಪತ್ರವನ್ನು 2006 ರಲ್ಲಿ ಬರೆದುಕೊಟ್ಟಿರುತ್ತಾರೆ. ಹೊರಲಗಲ್ಲು ಗ್ರಾಮದ ಸರ್ವೆ ನಂ.179 ರ ಜಮೀನಿನ ಕುರಿತಾಗಿ ದಾವೆ ಸಲ್ಲಿಸಿರುತ್ತಾರೆ. ಪ್ರತಿವಾದಿ ಬೋರಲಿಂಗಯ್ಯ ಇವರು ವಾದಿ ನಾಗರಾಜು ಇವರಿಗೆ ಕ್ರಯದ ಕರಾರು ಪತ್ರವನ್ನು 2006 ರಲ್ಲಿ ರೂ.1.80,000/- ಕ್ಕೆ ಆಗಿದ್ದು, ಅದರಲ್ಲಿ 15 ಸಾವಿರ ಹಣವನ್ನು ಮುಂಗಡ ನೀಡಿ ಬರೆದುಕೊಟ್ಟಿರುತ್ತಾರೆ. ಸದರಿ ಕರಾರು ಪತ್ರ ಸಂದರ್ಭದಲ್ಲಿ ವಾದಿಯರು, ಪ್ರತಿವಾದಿ ಪ್ರತಿವಾದಿಯ ಹೆಂಡತಿ, ಸಾಕ್ಷಿದಾರರಾದ ಮಹದೇವಯ್ಯ ಮತ್ತು ನಾನು ಹಾಜರಿದ್ದೆವು. ತಾಲ್ಲೂಕು ಕಚೇರಿಯ ಬಳಿ ವಾದಿ ಪ್ರತಿವಾದಿಗೆ ರೂ.15,000/- ಮುಂಗಡ ಹಣ ನೀಡಿರುತ್ತಾರೆ.

ದಾವಾಜಮೀನಿನ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಸರ್ಕಾರಿ ಹಳ್ಳ, ಉತ್ತರಕ್ಕೆ ಪುಟ್ಟಮಲ್ಲಯ್ಯ ಇವರ ಜಮೀನು ಮತ್ತು ದಕ್ಷಿಣಕ್ಕೆ ಹನುಮಂತನಾಯಕ್ ಇವರ ಜಮೀನು ಇರುತ್ತದೆ. ಸರ್ವೆ ನಂ.179 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಕರಾರುಪತ್ರದ ದಿನಾಂಕದಂದು ಪ್ರತಿವಾದಿಯ ಮಕ್ಕಳು ಕರಾರು ಪತ್ರದ ಸಂದರ್ಭದಲ್ಲಿ ಹಾಜರಿದ್ದ ಬಗ್ಗೆ ನನಗೆ ನೆನಪಿಲ್ಲ. ಬೋರಲಿಂಗಯ್ಯನಿಗೆ ದಾವಾಸ್ವತ್ತು ಸರ್ಕಾರದಿಂದ ಮಂಜೂರಾಗಿರುತ್ತದೆ. ದಾವಾಸ್ವತ್ತಿನಲ್ಲಿ ನಾಗರಾಜು ಸ್ವಾಧೀನದಲ್ಲಿರುತ್ತಾರೆ. ದಾವಾಸ್ವತ್ತಿನಲ್ಲಿ ನಾಗರಾಜು ಏನು ಬೆಳೆ ಬೆಳೆಯುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಬೋರಲಿಂಗಯ್ಯ ಯಾವುದೇ ಕರಾರು ಪತ್ರ ಬರೆದುಕೊಡದೆ ಇದ್ದರೂ 15 ಸಾವಿರ ಹಣ ಮುಂಗಡ ಪಡೆದು ಕರಾರು ಪತ್ರ

ಬರೆದುಕೊಟ್ಟಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ವತ್ತಿನ ಸ್ವಾದೀನದಲ್ಲಿ ಬೋರಲಿಂಗಯ್ಯನ ಮಕ್ಕಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.